**ಕರ್ನಾಟಕ ಸರ್ಕಾರ**

(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ)

# ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಯಮಿತ

ಗ್ರಾಮೀಣಾಭಿವೃದ್ಧಿ ಭವನ, 4ನೇ ಮತ್ತು 5ನೇ ಮಹಡಿ, ಆನಂದರಾವ್ ವೃತ್ತ, ಬೆಂಗಳೂರು-560009.

ದೂರವಾಣಿ ಸಂ: ಆಡಳಿತ: 080-28015635/36/46 ಕಾಮಗಾರಿ: 080-28015640/41 ಲೆಕ್ಕಪತ್ರ : 080-28015634/37

ಫ್ಯಾಕ್ಸ್ : 080-22879901, 28015644/45/34 ಇ-ಮೇಲ್ : md@kridl.net ವೆಬ್ ಸೈಟ್ : www.kridl.org


**ಸಂ**: ಕೆಆರ್‌ಐಡಿಎಲ್/ಕಾಮಗಾರಿ/EGL/2021-22 **ದಿನಾಂಕ**: 23/03/2022

## ಸುತ್ತೋಲೆ

**ಗೆ,**

ಎಲ್ಲಾ ಕಾರ್ಯಪಾಲಕ ಅಭಿಯಂತರರು,
ಕೆ.ಆರ್.ಐ.ಡಿ.ಎಲ್.

ಎಲ್ಲಾ ಸಹಾಯಕ ಕಾರ್ಯಪಾಲಕ ಅಭಿಯಂತರರು
ಕೆ.ಆರ್.ಐ.ಡಿ.ಎಲ್.

**ವಿಷಯ**: ಸಂಸ್ಥೆಗೆ ವಹಿಸಲಾದ ಕಾಮಗಾರಿಗಳನ್ನು ಸಂಸ್ಥೆಯ ಪರವಾಗಿ ನಿರ್ವಹಿಸಲು ಗ್ರೂಪ್ ಲೀಡರ್‌ಗಳನ್ನು ಸಂಸ್ಥೆಯಲ್ಲಿ empanelment ಮಾಡಿಕೊಳ್ಳುವ ಕುರಿತು.

**ಉಲ್ಲೇಖ**: 1. 204ನೇ ಆಡಳಿತ ಮಂಡಳಿ ಸಭೆ ದಿನಾಂಕ :25/10/2021.
2. ಪತ್ರಿಕಾ ಪ್ರಕಟಣೆ ಸಂಖ್ಯೆ:ಕೆಆರ್ ಐಡಿಎಲ್/ಕಾಮಗಾರಿ/ಇಜಿಎಲ್/2021-22, ದಿ:17/02/2022.
3. ಈ ಕಛೇರಿ ಪತ್ರ ಸಂ: ಕೆಆರ್‌ಐಡಿಎಲ್/ಕಾಮಗಾರಿ/EGL/2021-22, ದಿ:22/02/2022.

****

ಮೇಲಿನ ವಿಷಯ ಮತ್ತು ಉಲ್ಲೇಖದನ್ವಯ, ಸರ್ಕಾರದ ವಿವಿಧ ಇಲಾಖೆ / ಸಂಸ್ಥೆಗಳಿಂದ ಕೆಟಿಟಿಪಿ ಕಾಯ್ದೆ ಸೆಕ್ಷನ್ 4(ಇ4) ರ ಅಡಿಯಲ್ಲಿ ವಹಿಸಲಾದ ಕಾಮಗಾರಿಗಳನ್ನು ನಿರ್ವಹಿಸಲು ಉಪವಿಭಾಗಗಳಲ್ಲಿ ನುರಿತ ಮತ್ತು ಕುಶಲ ಕೆಲಸಗಾರರನ್ನು ಹಾಗೂ ಸಾಮಾಗ್ರಿಗಳನ್ನು ಸರಬರಾಜು ಮಾಡಲು ಅವಶ್ಯಕ ಮೂಲಭೂತ ಸೌಕರ್ಯಗಳನ್ನು ಹೊಂದಿರುವಂತಹ ಹಾಗೂ ಸಂಸ್ಥೆಯ ನಿಯಮಗಳನ್ನು ಪಾಲಿಸುವಂತವರನ್ನು ಸ್ಥಳೀಯವಾಗಿ ಗ್ರೂಪ್ ಲೀಡರ್ / ವೆಂಡರ್ ಎಂದು ಗುರುತಿಸಿ, ಸದರಿಯವರನ್ನು ಕಾಮಗಾರಿಗಳ ನಿರ್ಮಾಣ ಕಾರ್ಯದಲ್ಲಿ ತೊಡಗಿಸಲು, ಗ್ರೂಪ್ ಲೀಡರ್ / ವೆಂಡರ್‌ಗಳನ್ನು ಕೆ.ಆರ್.ಐ.ಡಿ.ಎಲ್ Website ನಲ್ಲಿ Online ಸಾಫ್ಟ್‌ವೇರ್ ಮೂಲಕ Empanelment ಮಾಡಿಕೊಳ್ಳಲು ಎಲ್ಲಾ ಗ್ರೂಪ್ ಲೀಡರ್ / ವೆಂಡರ್ ಗಳಿಗೆ ತಿಳಿಯಪಡಿಸಲು ಉಲ್ಲೇಖ (3) ರಲ್ಲಿ ಸೂಚಿಸಲಾಗಿರುತ್ತದೆ.

ಸದರಿ ನೋಂದಣಿ ಪ್ರಕ್ರಿಯೆಯನ್ನು ತಿದ್ದುಪಡಿ ಮಾಡಿ, ಕೆಆರ್‌ಐಡಿಎಲ್ ವೆಬ್ ಸೈಟ್ :- www.kridl.org ನಿಂದ ಅಪ್ಲಿಕೇಷನ್ ಡೌನ್ ಲೋಡ್ ಮಾಡಿ, ಭರ್ತಿ ಮಾಡಿದ ಅಪ್ಲಿಕೇಷನ್ ಜೊತೆಗೆ ವ್ಯವಸ್ಥಾಪಕ ನಿರ್ದೇಶಕರು, ಕೆಆರ್‌ಐಡಿಎಲ್, ಬೆಂಗಳೂರು ರವರ ಹೆಸರಿನಲ್ಲಿ ರೂ.5000/-ಗಳ Demand Draft ನ್ನು ಸಂಬಂಧಪಟ್ಟ ಕೆಆರ್‌ಐಡಿಎಲ್ ವಿಭಾಗಗಳ ಕಛೇರಿಯಲ್ಲಿ ನಿಯಮಾನುಸಾರ ಎಲ್ಲಾ ಸೂಕ್ತ ದಾಖಲಾತಿಗಳೊಂದಿಗೆ ಸಲ್ಲಿಸಿ, ದಿನಾಂಕ: 23/03/2022 ರಿಂದ ನೋಂದಣಿ ಮಾಡಿಕೊಳ್ಳಲು ತಿಳಿಯಪಡಿಸಲಾಗಿದೆ.

ಕಾರ್ಯಪಾಲಕ ಅಭಿಯಂತರರು ಅರ್ಜಿಗಳನ್ನು ಸ್ವೀಕರಿಸಿ, ದಾಖಲಾತಿಗಳನ್ನು ಕೂಲಂಕೂಶವಾಗಿ ಪರಿಶೀಲಿಸಿ, ಶಿಫಾರಸ್ಸಿನೊಂದಿಗೆ ಅಧೀಕ್ಷಕ ಅಭಿಯಂತರರಿಗೆ ಅನುಮೋದನೆಗಾಗಿ ಸಲ್ಲಿಸಿ, ಅನುಮೋದನೆ ನಂತರ ಅಧೀಕ್ಷಕ ಅಭಿಯಂತರರು Group Leader / Vender Enrollment Certificate ನ್ನು ವಿತರಿಸಲು ಆದೇಶಿಸಿದೆ.

ಹೆಚ್ಚಿನ ಮಾಹಿತಿಗಾಗಿ ಕಾರ್ಯಪಾಲಕ ಅಭಿಯಂತರರು, Project Consultancy Cell, ಮೊ.ಸಂ:- 9480828260 ರವರನ್ನು ಅಥವಾ ಗಣಕಯಂತ್ರ ಶಾಖೆ ದೂರವಾಣಿ ಸಂಖ್ಯೆ: 080-28015239 ನ್ನು ಸಂಪರ್ಕಿಸಲು ತಿಳಿಸಿದೆ.

23/3/22

**ವ್ಯವಸ್ಥಾಪಕ ನಿರ್ದೇಶಕರು**
**ಕೆ.ಆರ್.ಐ.ಡಿ.ಎಲ್, ಬೆಂಗಳೂರು**

**ಪ್ರತಿಯನ್ನು**

- ಮುಖ್ಯ ಅಭಿಯಂತರರು (ಬಿಬಿಎಂಪಿ / ಕೇಂದ್ರಿಯ /ಉತ್ತರ), ಕೆ.ಆರ್.ಐ.ಡಿ.ಎಲ್ ರವರ ಮಾಹಿತಿಗಾಗಿ.
- ಮುಖ್ಯ ಹಣಕಾಸು ಅಧಿಕಾರಿಗಳು, ಕೆ.ಆರ್.ಐ.ಡಿ.ಎಲ್ ರವರ ಮಾಹಿತಿಗಾಗಿ.
- ಮುಖ್ಯ ಆಡಳಿತಾಧಿಕಾರಿಗಳು, ಕೆ.ಆರ್.ಐ.ಡಿ.ಎಲ್ ರವರ ಮಾಹಿತಿಗಾಗಿ.
- ಉಪ ಹಣಕಾಸು ಅಧಿಕಾರಿಗಳು, ಕೆ.ಆರ್.ಐ.ಡಿ.ಎಲ್ ರವರ ಮಾಹಿತಿಗಾಗಿ.
- ಅಧೀಕ್ಷಕ ಅಭಿಯಂತರರು, ಕೆ.ಆರ್.ಐ.ಡಿ.ಎಲ್, ಬೆಂಗಳೂರು / ಬಿಬಿಎಂಪಿ / ಬೆಳಗಾವಿ / ಕೇಂದ್ರಿಯ (ಚಿತ್ರದುರ್ಗ) / ಮೈಸೂರು / ಕಲಬುರಗಿ ವಲಯ, ರವರ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ.